aglasem.com

FOR KARNATAKA CLASS 11 PREPARATION

Karnataka 1st PUC Model Question Paper 2027 for Optional Kannada (Paper 2)

EXAM	YEAR	TYPE	SUBJECT
Karnataka Class 11	2027	Sample Paper	Kannada

ಒಟ್ಟು ಅಂಕಗಳು : 80 ಒಟ್ಟು ಪ್ರಶ್ನೆಗಳು : 53
ಸಮಯ : 3 ಗಂಟೆ ಮಾದರಿ ಪ್ರಶ್ನೆ ಪತ್ರಿಕೆ – 2 ಉತ್ತರಿಸಬೇಕಾದ ಪ್ರಶ್ನೆಗಳು 40

ಸೂಚನೆ : "ಅ" ವಿಭಾಗ ದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

ಅ–ವಿಭಾಗ

I. ಸರಿಯಾದ ಉತ್ತರವನ್ನು ಆಯ್ಕೆಮಾಡಿ ಬರೆಯಿರಿ. 1X5=5

1. ಶ್ರಾವಣ ಈ ಉಡುಪನ್ನುಟ್ಟು ಬಂದಿತು
ಅ) ಹಸಿರು ಆ) ಬನದ
ಇ) ಬೆಳಕು ಈ) ಹಾವಸೆಯಾ

2. 'ಪಂಪಸಾಗರ ಬಸವಸಾಗರ ಕಾರಂಜಾ ತೆರೆಗಳಲ್ಲಿ
ಹೊಸತು ಕಾವ್ಯವ ಬರೆಯಬೇಕಿದೆ ಬದುಕು ಬಣ್ಣವೇರಲಿಕೆ'
– ಈ ಸಾಲುಗಳಲ್ಲಿ ಬದುಕು ಬಣ್ಣವೇರಲಿಕೆ ಮಾಡಬೇಕಿರುವುದು
ಅ) ಕಾವ್ಯ ಪರಂಪರೆಯನ್ನು ಓದಬೇಕು
ಅ) ಪಂಪ ಬಸವರನ್ನು ಅನುಸರಿಸಬೇಕು
ಇ) ಹೊಸ ಸಂವೇದನೆಯ ಕಾವ್ಯ ರಚನೆ ಮಾಡಬೇಕು
ಈ) ಕಾರಂಜಾ ತೆರೆಗಳಲ್ಲಿ ಹೊಸತನದಿಂದ ತೇಲಬೇಕು

3. ಕನಸುಗಳು ಇಲ್ಲಿ ಬಂದಿಯಾಗಿವೆ. ಅ) ಪಂಪಸಾಗರದಲ್ಲಿ ಅ) ಹಾಳು ಕೋಟೆಗಳಲ್ಲಿ ಇ) ನೀಲಾಂಬರದಲ್ಲಿ ಈ) ಅಂಬರದಲ್ಲಿ

4. ಕಾಣುತ್ತಿದೆ ನಿಮ್ಮದೇ ಕ್ರೂರ ಮುದ್ರೆ. ಅ) ಮುದ್ರೆ ಮೇಲೆ ಆ) ಸುಪ್ರಭಾತದ ಮೇಲೆ ಇ) ನಾಗರಿಕತೆಯ ಮೇಲೆ ಈ) ಚರಿತ್ರೆಯ ಮೇಲೆ

5. ಇವರ ಕೈ, ಕಣ್ಣು, ಮನಸ್ಸು ಮಲ್ಲಿಗೆಯಾಗಲಿ. ಅ) ಗುಡಿಸಲುಗಳಿಗೆ ಬೆಂಕಿ ಇಟ್ಟವರು ಇ) ತ್ಯಾಗ ಮಾಡಿದವರು ಆ) ಹೂ ಕಟ್ಟಿದವರು
ಈ) ಕಾಗದದ ದೋಣಿ ಬಿಟ್ಟವರು

II. ಸರಿಯಾದ ಉತ್ತರವನ್ನು ಆಯ್ದು ಖಾಲಿಜಾಗ ಭರ್ತಿಮಾಡಿ 1X5=5

6. 'ತಂತ್ರ' ಪದದ ಅರ್ಥ
7. 'ಜವಾನ' ಪದದ ಸಮಾನಾರ್ಥ ಪದಗಳು
8. 'ಮಾಡು' ಪದದ ನಾನಾರ್ಥ ಪದಗಳು
9. 'ಪ್ರಯಾಣ' ಪದದ ತತ್ಸಮ ರೂಪ
10. 'ಶೈತ್ಯೋಪಚಾರ' ಪದದ ಬಿಡಿಸಿ ಬರೆದ ರೂಪ
(ಉಪಾಯ, ಸೇವಕ–ಸಹಾಯಕ, ಮೇಲ್ಚಾವಣಿ–ಕೆಲಸ ಮಾಡು, ಪಯಣ, ಶೈತ್ಯ+ಉಪಚಾರ,)

III. ಸರಿಯಾದ ಉತ್ತರವನ್ನು ಅಯ್ದು ಹೊಂದಿಸಿ ಬರೆಯಿರಿ 1X5= 5

11. ಅ) ಇಳೆ ಸಮಯ
ಆ) ಹೊತ್ತು ಮಾರಿದ್ದಾರೆ
ಇ) ಕಿವಿಮಾತು ನಕ್ಷತ್ರ
ಈ) ಮಾರ್ಯಾರ ಪಿಸುಮಾತು
ಉ) ತಾರೆ ಕಠಿಣ
ಭೂಮಿ

IV. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ 1X 5=5

12. ಶ್ರೋತ್ರಿಯನೆಂರೆ ಯಾರು?
13. ಪ್ರಪಂಚದಲ್ಲೇ ಹಿರಿದಾದ ಚರ್ಚು ಯಾವುದು?
14. ಯಾರ ಮೈಮೇಲೆ ಹೆಚ್ಚಾಗಿ ದೆವ್ವ ಬರುತ್ತದೆ?
15. ಪುಣೆಯಲ್ಲಿ ಪ್ರಸಿದ್ಧ ಕಾಲೇಜಿನ ಹೆಸರೇನು?
16. ತಿರುಮಲಾಂಬ ಅವರ ತಂದೆ–ತಾಯಿಗಳಾರು?

ಪ್ರ – ವಿಭಾಗ

V. ಕೆಳಗಿನ ಪ್ರಶ್ನೆಗಳಲ್ಲಿ ನಾಲ್ಕಕ್ಕೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ 2X4=8

17. ನರರಲ್ಲಿ ಯಾವ ಯಾವ ಗುಣಗಳಿವೆ?
18. ಸಿರಿ ಮತ್ತು ದೊರೆತನಗಳು ಬಂದಾಗ ಮನುಷ್ಯನು ಹೇಗಿರಬೇಕು?
19. ಅಕ್ಕ ತನ್ನ ತಮ್ಮನಿಗೆ ಹೇಳಿದ ತಿಳಿವಳಿಕೆ ಯಾವುದು?
20. ಮಾವಿನ ಕಾಯಿಗಳಲ್ಲಿರುವ ಬೇಧ ಯಾವುವು?
21. ಯಾರನ್ನು ಜಿಗಣಿಗಳಿಗೆ ಹೋಲಿಸಲಾಗಿದೆ?
22. ಕವಿ ಯಾರನ್ನು ಮೌನ ಸಂಗಾತಿಗಳು ಎಂದು ಕರೆದಿದ್ದಾರೆ? ಏಕೆ?

VI. ಕೆಳಗಿನ ಮೂರು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ 3X3=9

23. 'ಆಚಾರವೆ ಕುಲ, ಅನಾಚಾರವೇ ಹೊಲೆ.'
24. 'ಸಿರಿ ಬಂದ ಕಾಲಕ್ಕೆ ಬಲು ಮೆರೆಯಬೇಡ.'
25. 'ಕಾಮಾದಿಗಳ ಜಯಿಸೆಂದು ಕೈವಿಡಿದನುಗ್ರಹಿಸುವ.'
26. 'ಬುದ್ಧಿ ಭಾವಗಳೆಲ್ಲವೂ ಅವಳವೇ ಆಗಿರಲಿ!'

VII. ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ 4X2 = 8

27. 'ಸಮರಸವೇ ಜೀವನ' – ಈ ಮಾತನ್ನು ಸಿದ್ಧಯ್ಯ ಪುರಾಣಿಕರ ವಚನದ ಹಿನ್ನೆಲೆಯಲ್ಲಿ ವಿವೇಚಿಸಿ.
28. ಆಚರಣೆಗಿಂತ ಭಕ್ತಿ–ಭಾವ ಮುಖ್ಯ ಎಂಬುದು ಅಕ್ಕನ ವಚನದಲ್ಲಿ ಹೇಗೆ ವ್ಯಕ್ತವಾಗಿದೆ?
29. ಒಕ್ಕಲಿಗರು ಎದುರಿಸಿದ ಬರಗಾಲದ ಭೀಕರ ಪರಿಸ್ಥಿತಿಯನ್ನು ವಿವರಿಸಿ.
30. ದಲಿತರ ಬದುಕಿನ ಬವಣೆಯನ್ನು ಮಳೆ ಪ್ರತಿಮೆಯ ಮೂಲಕ ಹೇಗೆ ಚಿತ್ರಿಸಲಾಗಿದೆ?

VIII. ಕೆಳಗಿನ ಯಾವುದಾದರೂ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ. 4XI=4

31. ತಂದೆ–ತಾಯಿ ತಿರಿದು ತಿನಲು ಒಂದು ದಿನ ಕೇಳಲಿಲ್ಲ
ಮಂದಗಮನೆಯರೊಡನೆ ಆನಂದದಿಂದಲಿರುವರು
ತಂದೆ ಸತ್ತಮೇಲೆ ನೂರುಮಂದಿ ವಿಪ್ರರಿಗುಣಿಸಿ ತಮ್ಮ
ತಂದೆ ತೃಪ್ತನಾದನೆಂಬರು ಮಂದಮತಿಯ ಜನಗಳು

32. ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು ।
ದೊರೆತುದ ಹಸಾದವೆಂದುಣ್ಣು ಗೊಣಗಿಡದೆ ॥
ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ ।
ಹೊರಡು ಕರೆ ಬರಲಳದೆ – ಮಂಕುತಿಮ್ಮ.

ಇ–ವಿಭಾಗ

IX. ಕೆಳಗಿನ ಪ್ರಶ್ನೆಗಳಲ್ಲಿ ಎರಡಕ್ಕೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ 2X2=4

33. ಬ್ರಾಹ್ಮಣ್ಯದ ಚಿಹ್ನೆಗಳಾವುವು?
34. ರೋಮ್ ನಗರವನ್ನು ಕುರಿತ ಎರಡು ಹಳೆಯ ಗಾದೆಗಳು ಯಾವುವು?
35. ಪರೋಕ್ಷ ಪ್ರತಿಭಟನೆ ಮತ್ತು ಸಂಪರ್ಕ ಸಾಧನೆ ಎಂದರೇನು?
36. ಲೇಖಕರು ಪ್ರೆಸ್ಸಿನಲ್ಲಿ ಕೆಲಸಕ್ಕೆ ಸೇರಲು ಕಾರಣವೇನು?

X. ಕೆಳಗಿನವುಗಳಲ್ಲಿ ಎರಡು ಹೇಳಿಕೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ 3X2=6

37. 'ಇದು ಆಧುನಿಕ ಇಟಲಿಯಲ್ಲ: ಇಂದಿಗೂ ಪ್ರಾಚೀನ ರೋಮ್'
38. 'ಕುಬುಸ ತೊಟ್ಕೊಂಡು ಅದ್ಯಾವ ನರಕಕ್ಕೋಗ್ಲಿ?'
39. 'ತಾಯಿಯಿಲ್ಲದ ತಬ್ಬಲಿಯಾಗಬೇಕಾಯಿತು.'

XI. ಕೆಳಗಿನ ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ 4X2 = 8

40. ಧೂರ್ತರು ವಂಚನೆಗೆ ಬಳಸಿದ ಉಪಾಯ ಮತ್ತು ಅದರ ಪರಿಣಾಮವನ್ನು ಕುರಿತು ಬರೆಯಿರಿ.
41. ಮೈಮೇಲೆ ದೇವರು ಬರುವ ವ್ಯಕ್ತಿ ಕಟ್ಟುವ ಆಟಗಳಾವುವು?
42. ನಗರ ಜೀವನ ನೆಟ್ಟಲ್ಲುವಿನ ಮೇಲೆ ಬೀರಿದ ಪ್ರಭಾವಗಳನ್ನು ವಿವರಿಸಿರಿ.
43. ತಿರುಮಲಾಂಬ ಅವರ ಸಾಧನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

ಈ–ವಿಭಾಗ

(ಭಾಷೆ, ಸಾಹಿತ್ಯ, ಸ್ವರೂಪ)

XII. ಕೆಳಗಿನವುಗಳಲ್ಲಿ ಎರಡು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ 2X2 = 4

44. ಸಾಹಿತ್ಯ ರಚನೆಗೆ ಪ್ರೇರಣೆ ಯಾವುದು?

45. ಸಾಹಿತ್ಯ ರಚನೆಗೆ ಅಗತ್ಯವಾದ ಮೂರು ಅಂಶಗಳನ್ನು ಬರೆಯಿರಿ.

46. 'ವಚನ ಸಾಹಿತ್ಯ'ದ ವಿಶೇಷತೆ ಏನು?

ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ 4X1 = 4

47. ಕನ್ನಡ ಭಾಷೆಯ ಪ್ರಾಚೀನತೆಯನ್ನು ಕುರಿತು ಬರೆಯಿರಿ.

48. ಹತ್ತನೇ ಶತಮಾನದ ಕನ್ನಡ ಸಾಹಿತ್ಯದ ವಿಶೇಷತೆಯನ್ನು ಬರೆಯಿರಿ.

ಉ– ವಿಭಾಗ (ರಚನೆ)

xiv. ಕೆಳಗಿನ ಪಠ್ಯಭಾಗವನ್ನು ಗಮನಿಸಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ. 1X5 = 5

ಪಠ್ಯಭಾಗ :

ಜನಪದ ಸಾಹಿತ್ಯ ಕನ್ನಡ ಸಾಹಿತ್ಯದ ತಾಯಿ ಬೇರು, ಬೇಟಗೇರಿ ಕೃಷ್ಣಶರ್ಮರು ಹೇಳುವ ಹಾಗೆ ಜನವಾಣಿ ಮಳೆ, ಕವಿವಾಣಿ ಹೊಳೆ ಇದು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಸಾಗಿ ಬರುವ ಕಂಠಸ್ಥ ಸಾಹಿತ್ಯವಾಗಿದೆ. ಮೌಖಿಕ ಪರಂಪರೆಯ ಜನಪದ ಸಾಹಿತ್ಯ, ಸಾಮೂಹಿಕ ಸೃಷ್ಟಿ, ಪ್ರಸರಣಗುಣ ಜನಪದ ಸಾಹಿತ್ಯದ ಜೀವಾಳ. ಜನಪದ ಸಾಹಿತ್ಯ ಮನುಷ್ಯ ಬೆಳೆದಂತೆಲ್ಲ ಅನಕ್ಷರಸ್ಥರ ಪರಿಧಿಯಲ್ಲಿಯೇ ಬೆಳೆದು, ಅವರ ನಾಲಗೆಯ ಮೇಲೆ ಜೀವಂತವಾಗಿ ಉಳಿದು ಬಂದಿರುವ ಸಾಹಿತ್ಯ.

ಜನಪದ ಸಾಹಿತ್ಯದ ವ್ಯಾಪ್ತಿ ಸಾಗರದಷ್ಟು ಆಳ. ಆಕಾಶದಷ್ಟು ಅಗಲವಾದುದು. ಜನಪದರು ಜೀವನದ ಒಲವು–ಚೆಲುವುಗಳಿಗೆ, ಸೋಲು–ಗೆಲುವು, ನೋವು–ನೆಲವುಗಳಿಗೆ ಎದೆಯೊಡ್ಡಿ, ಜೀವನದ ಒಟ್ಟು ಕ್ರಿಯೆಗಳ ಪಾಡನ್ನು ಹಾಡಾಗಿಸಿದ್ದಾರೆ. ಜನಪದ ಸಾಹಿತ್ಯದ ಬಹುಪಾಲನ್ನು ಪದ್ಯ ಪ್ರಕಾರವೇ ಆಕ್ರಮಿಸಿಕೊಂಡಿದೆ. ಹಾಡುಗಳೆಂದು ಗುರುತಿಸಬಹುದು. ಇವುಗಳಲ್ಲಿ ಹಂತಿ, ಗೀಗಿ, ಹೋಳಿ, ಲಾವಣಿ, ಜನಪದ ಪದ್ಯ ಸಾಹಿತ್ಯವನ್ನು ಗಂಡಸರ ಹಾಡು, ಹೆಂಗಸರ ಹಾಡು, ಮಕ್ಕಳ ಮೋಹರಂ, ಕೋಲಾಟ, ಡೊಳ್ಳಿನ ಹಾಡುಗಳು, ಸೋಬಾನೆ ಪದಗಳು, ಬೀಸುವ, ಕುಟ್ಟುವ ಹಾಡು, ಶಿಶು ಪ್ರಾಸಗಳೆಂದು ವಿಭಜಿಸಬಹುದಾಗಿದೆ. ಆಧುನಿಕ ಯುಗದಲ್ಲಿ ಮೂಲ ಸ್ವರೂಪ ಕಳೆದುಕೊಂಡು ಕಣ್ಮರೆಯಾಗುತ್ತಿರುವ ಜನಪದ ಸಾಹಿತ್ಯ, ಸಂಸ್ಕೃತಿ, ಕಲೆ, ಕ್ರೀಡೆಗಳನ್ನು ಉಳಿಸಿ ದೇಶೀಯತೆಯನ್ನು ಮೆರೆಯುವುದು ಪ್ರತಿಯೊಬ್ಬರ ಅವಾಬ್ದಾರಿಯಾಗಿದೆ.

ಪ್ರಶ್ನೆಗಳು :

49. ಕನ್ನಡ ಸಾಹಿತ್ಯದ ತಾಯಿ ಬೇರು ಯಾವುದು?

50. ಜನಪದ ಸಾಹಿತ್ಯದ ವ್ಯಾಪ್ತಿ ತಿಳಿಸಿ?

51. ಜನಪದ ಸಾಹಿತ್ಯದಲ್ಲಿ ಯಾವ ಪ್ರಕಾರ ಹೆಚ್ಚಾಗಿದೆ.

52. ಜನಪದ ಹಾಡಿನ ಪ್ರಕಾರಗಳು ಯಾವುವು?

53. ಜನಪದ ಸಾಹಿತ್ಯದ ಬಗ್ಗೆ ಬೇಟಗೇರಿ ಕೃಷ್ಣಶರ್ಮರ ಅಭಿಪ್ರಾಯವೇನು?